# ಕೃತಜ್ಞತೆ

ನನ್ನ ಜೀವನದ ಬಹುದಿನಗಳ ಆಸೆಯಾಗಿದ್ದ ಪಿಎಚ್.ಡಿ. ಪದವಿಗಾಗಿ ನಾನು ಹಲವಾರು ವರ್ಷಗಳಿಂದ ಮಾರ್ಗದರ್ಶಕರಿಗಾಗಿ ನಾನಾ ವಿಶ್ವವಿದ್ಯಾನಿಲಯಗಳ ಪ್ರಾಧ್ಯಾಪಕರುಗಳನ್ನು ಸಂದರ್ಶಿಸುತಿದ್ದೆ. ಕೊನೆಗೆ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿನ ನನ್ನ ಗುರುಗಳನ್ನು ಭೇಟಿ ಮಾಡಿದಾಗ ಅವರ ಬಳಿಯೂ ಅವಕಾಶವಿರಲಿಲ್ಲ. ಈಗೆ ಪ್ರಯತ್ನಶೀಲನಾಗಿರುವಾಗಲೇ ಸಹೃದಯಿಗಳಾದ ಡಾ. ಎಂ. ನಂಜಯ್ಯಹೊಂಗನೂರು ಅವರು ಮುಕ್ತ ಮನಸ್ಸಿನಿಂದ ನನಗೆ ಮಾರ್ಗದರ್ಶನ ಮಾಡಲು ಒಪ್ಪಿಕೊಂಡರು. ಸಂಶೋಧನ ವಿಷಯವನ್ನು ಚರ್ಚಿಸುವಾಗ ನನ್ನ ಆಸಕ್ತಿಯು ವಚನ ಸಾಹಿತ್ಯದ ಬಗ್ಗೆ ಇದ್ದ ಧಾರ್ಮಿಕ ಪ್ರಜ್ಞೆಯನ್ನು ಗಮನಿಸಿದ, ಮಾರ್ಗದರ್ಶಕರು ನಮ್ಮ ಸುತ್ತ ಇರುವಂತ ನೂರಾರು ವರ್ಷಗಳ ಇತಿಹಾಸವನ್ನು ಹೊಂದಿ ಸಮಾಜದ ಅವಿಬಾಜ್ಯ ಅಂಗವಾಗಿರುಂವತಹ ಸಾವಿರಾರು ವೀರಶೈವ ಮಠಗಳಿವೆ. ಅವುಗಳ ಬಗ್ಗೆ ಅಧ್ಯಯನ ಮಾಡಿ ಎಂದರು. ಆದರೆ ಮಠಗಳ ಬಗ್ಗೆ ಅಭ್ಯಸಿಸಲು ಹೊರಟರೆ ಅದು ಸಮಗ್ರತೆಯ ದೃಷ್ಟಿಯಿಂದ ವಿಶಾಲವಾಗುತ್ತದೆ ಎಂದು ಗ್ರಹಿಸಿ. ಮೈಸೂರು ಜಿಲ್ಲೆಯಲ್ಲಿರುವ ವೀರಶೈವ ಮಠಗಳು ಸಮಾಜಕ್ಕೆ ಧಾರ್ಮಿಕ, ಶೈಕ್ಷಣಿಕ, ಸಾಹಿತ್ಯಕವಾಗಿ ವಿಫುಲವಾದ ಕೊಡುಗೆ ನೀಡಿ ಸೇವೆ ಸಲ್ಲಿಸುತ್ತಿವೆ. ಇವುಗಳನ್ನು ಕುರಿತು ಸಂಶೋಧನೆ ಮಾಡಿ ಎಂದು ನನ್ನೊಳಗೆ ಸೂಪ್ತಾವಸ್ತೆಯಲ್ಲಿರುವ ಧರ್ಮಜಾಗೃತಿಯನ್ನು ಎಚ್ಚರಿಸಿದರು. ಕೊನೆಗೆ **"ಮೈಸೂರು ಜಿಲ್ಲೆಯ ವೀರಶೈವ ಮಠಗಳು : ಸಾಂಸ್ಕೃತಿಕ ಅಧ್ಯಯನ"** ಶೀರ್ಷಿಕೆ ನೀಡಿ ಸಂಶೋಧನೆ ಮಾಡಲು ಅವಕಾಶ ಮಾಡಿಕೊಟ್ಟು ಮಾರ್ಗದರ್ಶನ ಮಾಡಿದಂತ ಸರಳ ವ್ಯಕ್ತಿತ್ವದ ಡಾ.ಎಂ.ನಂಜಯ್ಯ ಹೊಂಗನೂರರಿಗೆ ಮೊದಲನೆಯದಾಗಿ ಕೃತಜ್ಞತೆಗಳನ್ನು ಸಲ್ಲಿಸಲು ಇಚ್ಛಿಸುತ್ತೇನೆ.

ನಾನು ಸಂಶೋಧನೆ ಮಾಡಲು ವಿಶೇಷ ಅನುಮತಿ ಪಡೆಯಲು ಸಹಕರಿಸಿದಂತ ಲೋಕೋಪಯೋಗಿ ಸಚಿವರಾದ ಡಾ.ಎಚ್.ಸಿ.ಮಹದೇವಪ್ಪ ಮತ್ತು ಮಾಜಿಸಚಿವರಾದ ಡಾ.ಬಿ.ಕೆ.ಚಂದ್ರಶೇಖರ್‌ರವರಿಗೂ ನಾನು ಈ ಸಂದರ್ಭದಲ್ಲಿ ಧನ್ಯವಾದಗಳು ಆರ್ಪಿಸುತ್ತೇನೆ. ಮತ್ತು ವಿಶೇಷ ಅನುಮತಿ ನೀಡಿದ ಅಂದಿನ ಕುಲಪತಿ ಡಾ.ವಿ.ಜಿ.ತಳವಾರ್‌ರವರು ಹಾಗೂ ಸಕಾಲಕ್ಕೆ ನೆರವು ನೀಡಿದ ಮೈಸೂರು ವಿಶ್ವವಿದ್ಯಾನಿಲಯದ ಮಹಾದೇವಪ್ಪ, ಪತ್ರಕರ್ತರಾದ ಎಂ. ಮಹದೇವ, ನಾರಾಯಣ್ ರವರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಸಂಶೋಧನೆ ಮಾಡಲು ಸ್ಫೂರ್ತಿ ತುಂಬಿ ಪಿಎಚ್.ಡಿ. ಪದವಿ ಪಡೆಯಲೇಬೇಕೆಂಬ ಹಠವನ್ನೂ ತುಂಬಿ ಸದಾ ಕಾತುರತೆಯಿಂದ ಕಾಯುತ್ತ ನನ್ನನ್ನೂ ಆಶೀರ್ವಾದಿಸುತ್ತಿರುವ ಬಿ.ಎಚ್.ಎಸ್. ಉನ್ನತ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎನ್.ಎಸ್.ಸುಂದರರಾಜನ್ ಅವರಿಗೆ ಕಾರ್ಯದರ್ಶಿಗಳಾದ ಪ್ರೊ.ಬಿ.ವಿ.ನಾರಯಣರಾವ್ ಅವರಿಗೆ ಮತ್ತು ಸಂಸ್ಥೆಯ ಎಲ್ಲಾ ಪದಾಧಿಕಾರಿಗಳಿಗೂ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ನನಗೆ ಸ್ಫೂರ್ತಿ ನೀಡಿ ಮಾಹಿತಿ ನೀಡಿದಂತ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ವೀರಶೈವ ಮಠಾಧೀಶರ ಪಾದರಾವಿಂದಗಳಿಗೆ ಕೃತಜ್ಞತಾಪೂರ್ವ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಮಹಾಪ್ರಬಂಧ ಮೂಡಿಬರಲು ನೆರವಾದ ನನ್ನ ಅನೇಕ ಮಿತ್ರರಿಗೂ ಜೆ.ಎಸ್.ಎಸ್.ಸಂಸ್ಥೆಯ ಉದ್ಯೋಗಿಗಳಿಗೂ,ಹಾಗೂ ಶ್ರೀ ಪ್ರಸಾದ್‌ಮೂರ್ತಿ, ಶ್ರೀ ತ್ರಿಪುರಾಂಕರ ಮತ್ತು ನನ್ನ ಗುರುಗಳಾದ ಪ್ರೊ.ಡಿ.ಎಸ್.ಸದಾಶಿವಮೂರ್ತಿ, ಹೊಸಕೋಟೆ ದೇವಣ್ಣ ಮತ್ತು ಮಲೆಯೂರು ಗುರುಸ್ವಾಮಿ ಅವರನ್ನು ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ.

ಈ ಪ್ರಬಂಧಕ್ಕೆ ಸಂಬಂಧಿಸಿದಂತೆ ಸದಾ ನನ್ನೊಡನೆ ಮಾತನಾಡುವ ಮತ್ತು ನನ್ನೊಳಗಿನ ಬರವಣಿಗೆ ಮತ್ತು ಧರ್ಮದ ಅರಿವನ್ನು ತಿಳಿಸಿದ ನನ್ನ ಹಿರಿಯ ಅಕ್ಕನಂತೆ ಮಾರ್ಗದರ್ಶನ ನೀಡಿದ ವಿದ್ಯೋದಯ ಪದವಿ ಕಾಲೇಜಿನ ನಿವೃತ್ತ ಕನ್ನಡ ಪಾಧ್ಯಾಪಕರಾದ ಡಾ. ಸಿ.ಜಿ.ಉಷಾದೇವಿಯವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಪಿಆರ್‌ಎಂ ಗ್ರಾಮೀಣ ಶಿಕ್ಷಣ ಯೋಜನೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಪ್ರಾಂಶುಪಾಲರಿಗೆ ನನ್ನ ಸಹೋದ್ಯೋಗಿ ಮಿತ್ರರಿಗೆ ಬೋಧಕೇತರ ವರ್ಗದವರಿಗೆ ಮಾದ್ಯಮದ ಮಿತ್ರರಿಗೆ ಹೃದಯಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮುಜರಾಯಿ ಇಲಾಖೆ, ಪ್ರಾಚ್ಯವಸ್ತು ಸಂಶೋಧನಾ ಇಲಾಖೆ ಮತ್ತು ಗ್ರಂಥಾಲಯದ ನಿರ್ವಾಹಕರಿಗೆ ಈ ಸಂದರ್ಭದಲ್ಲಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತೇನೆ.

ಈ ಪ್ರಬಂಧ ಸುಂದರವಾಗಿ ಮೂಡಿಬರಲು ನನ್ನ ಎಲ್ಲಾ ಕೆಲಸಕಾರ್ಯಗಳಲ್ಲೂ ಸಕ್ರಿಯವಾಗಿ ಭಾಗವಹಿಸಿ ಈ ಮಹಾಪ್ರಬಂಧದ ಕಚ್ಚಾಪ್ರತಿಗಳನ್ನು ತಿದ್ದಿದ ಹಾಗೂ ನನ್ನ ಏಳಿಗೆಯಲ್ಲಿ ತನ್ನ ಹಿರಿಯಮೆಯನ್ನು ಕಾಣುವ ನನ್ನ ಬಾಳಸಂಗಾಗಿ ಶ್ರೀಮತಿ ತ್ರಿವೇಣಿ (ಕಾವ್ಯ)ಗೂ ಹಾಗೂ ಸಂಶೋಧನಾ ಪ್ರಬಂಧ ಬರೆಯುವ ಹಂತದಲ್ಲಿ ಯಾವುದೇ ತೊಂದರೆ ನೀಡಿದೆ ಶ್ರದ್ಧೆಯಿಂದ ಗಮನಿಸುತ್ತಿದ್ದ ನನ್ನ ಮುದ್ದಿನ ಮಕ್ಕಳಾದ ಮಾಸ್ಟರ್‌ಚಿರಾಗ್ ಮತ್ತು ಮಾಸ್ಟರ್ ಚಿನ್ಮಯ್ ಹಾಗೂ ಕ್ಷೇತ್ರ ಕಾರ್ಯದಲ್ಲಿ ಸಹಕರಿಸಿದ ನನ್ನ ಬಾಮೈದುನ ಅಂಬರಿಷ್ ಮತ್ತು ಸದಾ ನಮ್ಮ

ಶ್ರೇಯೋಭಿಲಾಷಿಗಳಾದ ಅತ್ತೆ, ಮಾವ. ನಾನು ಈ ಹಂತಕ್ಕೆ ಬೆಳೆದು ಪಿಎಚ್.ಡಿ. ಸಂಶೋಧನೆ ಪ್ರಬಂಧ ಮಂಡಿಸಲು ಭದ್ರ ಬುನಾದಿ ಹಾಕಿದಂತ ನನ್ನ ಜನ್ಮಧಾತರಾದ ದಿವಂಗತಶಿವಮಲ್ಲಪ್ಪ ಮತ್ತು ಶ್ರೀಮತಿಸುಂದ್ರಮ್ಮನವರಿಗೂ, ನನ್ನ ಬಂಧುವರ್ಗದವರಿಗೂ ಹೃದಯಪೂರ್ವಕ ವಂದನೆಗಳನ್ನು ಅರ್ಪಿಸುತ್ತೇನೆ.

ಸಂಶೋಧನಾ ಸಂದರ್ಭದಲ್ಲಿ ಸಲಹೆ, ಸಹಕಾರ ನೀಡಿದಂತ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಡಾ. ಆರ್. ರಾಮಕೃಷ್ಣ, ಡಾ. ಎನ್.ಎಂ. ತಳವಾರ್, ಡಾ. ಜಿ.ಆರ್.ತಿಪ್ಪೇಸ್ವಾಮಿ, ಪ್ರೊ.ಎನ್.ಎಸ್.ತಾರಾನಾಥ ಇನ್ನೂ ಅನೇಕ ಪ್ರಾಧ್ಯಾಪಕರುಗಳಿಗೂ ಕಚೇರಿ ಸಿಬ್ಬಂದಿವರ್ಗದವರಿಗೂ ಹಾಗೂ ನನಗೆ ಸದಾ ಸಲಹೆ ಸಹಕಾರ ನೀಡಿದ ಶ್ರೀ ಎಂ.ಡಿ.ನಟರಾಜ್ ಅವರಿಗೆ ವಿಶೇಷವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

(ವೀರಭದ್ರಸ್ವಾಮಿ)